



## ಬೃಹದಾಕಾರದ ಸೂರ್ಯಪಾನ !

ಬಾದಾಮಿ ತಾಲೂಕಿನ ಗುಳೇದಗುಡ್ಡದ ಸಿ.ಎಂ.ಚಿಂದಿ ಅವರು ತಮ್ಮ ಹೊಲದಲ್ಲಿ ಅತ್ಯಂತ ದೊಡ್ಡ ಗಾತ್ರದ ಸೂರ್ಯಪಾನ ಬೆಳೆ ಬೆಳೆದು ರೈತರಿಗೆ ಮಾದರಿಯಾಗಿದ್ದಾರೆ. ಅವರು ಬೆಳೆದ ಸೂರ್ಯಪಾನದ ಒಂದು ತೆನೆಯು ಸುತ್ತಳತೆಯಲ್ಲಿ ಸುಮಾರು 31 ಇಂಚಿ (ವ್ಯಾಸ ಪ್ರಮಾಣದಲ್ಲಿ 13 ಇಂಚು) ನಷ್ಟಿದೆ. ಅವರು ಸುಮಾರು ನಾಲ್ಕು ಎಕರೆಯ ಹೊಲದಲ್ಲಿ ಸೂರ್ಯಪಾನ ಬಿತ್ತಿದ್ದಾರೆ. ಆದರೆ ಅದರಲ್ಲಿ ಒಂದು ಎಕರೆಯಲ್ಲಿ ಬೆಳೆದ ಸೂರ್ಯಪಾನ ಬೆಳೆ ಬೃಹದಾಕಾರದಲ್ಲಿ ಬೆಳೆದು ರೈತನ ಮೊಗದಲ್ಲಿ ಮಂದಹಾಸ ಮೂಡಿಸಿದೆ.

**ಚಿತ್ರ-ಬರಹ: ಮಲ್ಲಿಕಾರ್ಜುನ ರಾಜನಾಳ, ಬಾಗಲಕೋಟ**

## ಶಿಲಾ ಶಾಸನ

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಪ್ರಸಿದ್ಧ ಪುಣ್ಯ ಕ್ಷೇತ್ರ ಮುರುಡೇಶ್ವರದ ಬಸ್ತಿಯಲ್ಲಿ ವಿದ್ಯಾನಂದಿ ಮಹಾರಾಜರ ಶಿಷ್ಯ ಪಾಯಂಗಣ ಶ್ರೀ ಶಕೆ 1940 ರಲ್ಲಿ 1008 ಶ್ರೀ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದರು. ಇಲ್ಲಿನ ಸಂಪೂರ್ಣ ಇತಿಹಾಸ ಆಚರಣೆ, ಆಡಳಿತ ಎಲ್ಲವನ್ನೂ ಇಲ್ಲಿರುವ ಕಲ್ಲಿನ ಶಿಲಾಶಾಸನಗಳು ಪ್ರತಿಬಿಂಬಿಸುತ್ತವೆ.  ಈ ಹಿಂದೆ ಇಲ್ಲಿ ಸುಮಾರು 21 ಜೈನ ಬಸದಿಗಳು ಇದ್ದವು ಎಂಬ ಕುರುಹು ಇಲ್ಲಿದೆ.

**- ಬಳಕೂರು ವಿ.ಎಸ್.ನಾಯಕ್, ಬೆಂಗಳೂರು**





## ಪೆರಿಯಾರ್‌ನ ಬೃಹತ್ ಆಮೆ!

ನಾವು ಇತ್ತೀಚೆಗೆ ಕೇರಳ ಪ್ರವಾಸಕ್ಕೆ ಹೋದಾಗ ಅಲ್ಲಿಯ ಒಂದು ಪ್ರಸಿದ್ಧ ಪ್ರವಾಸಿ ತಾಣ ತೆಕ್ಕಾಡಿಗೆ ಬೇಟಿ ಕೊಟ್ಟಿದ್ದೆವು. ತೆಕ್ಕಾಡಿಯ ಸಮೀಪ ಮತ್ತೊಂದು ನೋಡಲೇಬೇಕಾದ ಸ್ಥಳ ಪೆರಿಯಾರ್ ವನ್ಯಜೀವಿ ಅಭಯಾರಣ್ಯ. ಅಲ್ಲಿಗೆ ಬಸ್ಸಿನಲ್ಲಿ ಹೋಗುವಾಗ ನಮ್ಮ ಪ್ರವಾಸಿ ಮಾರ್ಗದರ್ಶಿ ಪೆರಿಯಾರ್ ಅಭಯಾರಣ್ಯದ ಬಗ್ಗೆ ವಿವರಣೆ ಕೊಟ್ಟು 'ಅಲ್ಲಿ ಒಂದು ಆಮೆ ಇದೆ. ಆದರೆ ಅದಕ್ಕೆ 300 ವರುಷ ವಯಸ್ಸು ಆಗಿರುವುದರಿಂದ ಅದು ಒಂದೇ ಸ್ಥಳದಲ್ಲಿ ವ್ಯಾಸ್ತವ್ಯ ಹೂಡಿದೆ ಮತ್ತು ಅದನ್ನು ನೀವು ನೋಡಲು ಮರೆಯಬಾರದು' ಎಂದು ಹೇಳಿದರು. ಆದನ್ನು ನೊಡಲು ಎಲ್ಲರೂ ಉತ್ಸುಕತೆಯಿಂದ ಕಾಯುತ್ತಿದ್ದೆವು. ನಾವು ಅಲ್ಲಿ ಹೋಗಿ ನೋಡಿದಾಗ ನಮಗೆ ನಿರಾಸೆ ಮತ್ತು ಆಶ್ಚರ್ಯ. ಆ ಆಮೆಯ ಚಿತ್ರ ಇಲ್ಲಿದೆ ನೋಡಿ. ಅದು ಒಂದು ಆಮೆಯ ಆಕಾರದಲ್ಲಿ ಕಟ್ಟಿದ ಉಪಾಹಾರ ಗೃಹ.

**-ರವಿಶಂಕರ ವಿ ಕೋರಗಲ್, ಬೆಳಗಾವಿ**